ಹಡಗಿನ ಕ್ಯಾಪ್ಟನ್‌ನೊಂದಿಗೆ ಸಹಕರಿಸುತ್ತಾನೆ. ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ನ್ಯಾವಿಗೇಷನ್ ವ್ಯವಸ್ಥೆಯ ಕಾರಣ ಯಾವುದೇ ತಡೆಗಳನ್ನು ಕೇವಲ ಮೀಟರುಗಳ ಅಂತರದ ಅಳತೆಯಲ್ಲೂ ಅತಿ ನಾಜೂಕಿನಿಂದ ನಡೆಸಬಹುದಾಗಿದೆ. ಕೇವಲ ಬೆರಳುಗಳ ಕಂಟ್ರೋಲಿಗೆ 28 ಫೆರಾರಿ ಎಂಜಿನ್ನುಗಳಿಗೆ ಸಮನಾದ ಅಶ್ವಶಕ್ತಿಯ ಬೋ ತ್ರಸ್ಟರುಗಳು ಈ ನಡೆಗಳನ್ನು ಸಾಧ್ಯವಾಗಿಸುತ್ತವೆ. ಈ ಬೃಹತ್ ಸುಂದರಿ ಅತ್ಯಂತ ನಾಜೂಕಾಗಿ ಸಮುದ್ರದಲ್ಲಿ ತೇಲುತ್ತಾಳೆ.

ಇದರಲ್ಲಿ 30ಕ್ಕೂ ಹೆಚ್ಚು ಅಡುಗೆ ಮನೆಗಳಿವೆ. ಆಮ್ಲೆಟ್‌ಗಾಗಿ ಪ್ರತಿವಾರ 60,000 ಮೊಟ್ಟೆಗಳನ್ನು ಬಳಸಲಾಗುತ್ತದೆ. 30,000 ಆಲೂಗಡ್ಡೆಗಳು ಖರ್ಚಾಗುತ್ತವೆ. 254 ಕುಕ್‌ಗಳ ಜೊತೆಗೆ, 140 ಸಹಾಯಕರು ಅಡುಗೆ ಮನೆಗಳಲ್ಲಿ ಅವಿರತವಾಗಿ ಕೆಲಸಮಾಡುತ್ತಾರೆ. ಹಡಗಿನಲ್ಲಿ ಒಟ್ಟು 23 ಡೈನಿಂಗ್ ಸ್ಥಳಗಳಿವೆ. 5129 ಸೀಟುಗಳಿವೆ. ಅದರಲ್ಲಿ ಸೆಂಟ್ರಲ್ ಡೈನಿಂಗ್ ಹಾಲ್‌ನ ಮಧ್ಯಕ್ಕೆ ಮೂರು ಡೆಕ್ ಎತ್ತರದ ದೀಪಾಲಂಕಾರವನ್ನು ಇಳಿಬಿಡಲಾಗಿದೆ.

ಪ್ರಪಂಚದ ಅತ್ಯಂತ ಶ್ರೀಮಂತವಾದ ಈ ವಿಲಾಸಿ ಹಡಗಿನಲ್ಲಿ ಮನರಂಜನೆಗಾಗಿ ಹಲವು ಥಿಯೇಟರುಗಳಿವೆ. ಮುಖ್ಯವಾದ ‘ರಾಯಲ್ ಥಿಯೇಟರ್’ನಲ್ಲಿ 1100 ಆಸನಗಳ ವ್ಯವಸ್ಥೆಯಿದೆ. ಮೇಲ್ಹಾವಣಿ ಇರುವ ಮತ್ತು ಇಲ್ಲದಿರುವ ವೇದಿಕೆಗಳಿವೆ. ಇಲ್ಲಿನ ಒಂದು ಐಸ್ ರಿಂಕ್ 11,411 ಸ್ಕ್ವೇರ್ ಅಡಿಗಳಷ್ಟು ದೊಡ್ಡದಿದ್ದು, ಒಲಿಂಪಿಕ್ ಮಟ್ಟದ ಸ್ಕೇಟರ್‌ಗಳು ಇಲ್ಲಿ ಮನರಂಜಿಸುತ್ತಾರೆ. ನಾಟಕ, ಸಮರಕಲೆ, ಸರ್ಕಸ್, ಸಾಹಸ, ಆಕ್ವಾ ಥಿಯೇಟರ್ ಇತ್ಯಾದಿ ಬಗೆಯ ಎಲ್ಲ ವಿಧದ ಮನರಂಜನಾ ಕಾರ್ಯಕ್ರಮಗಳು ಪ್ರತಿ ರಾತ್ರಿ ನಡೆಯುತ್ತವೆ.

ಪ್ರತಿ ಬಂದರಿನಲ್ಲಿ ಇಳಿವ ಮತ್ತು ಸ್ಥಳಗಳ ಭೇಟಿ ಮುಗಿದ ನಂತರ ಮರಳಿಬರುವ ಪ್ರವಾಸಿಗರನ್ನು ಎಣಿಸಲು ಡಿಜಿಟಲ್ ವ್ಯವಸ್ಥೆಯಿದೆ. ಅದನ್ನು ನಿರ್ವಹಿಸಲೆಂದೇ ಮ್ಯಾನೇಜರುಗಳಿದ್ದಾರೆ.

ತ್ಯಾಜ್ಯಗಳ ಮರುಬಳಕೆಗೆ ಹಡಗಿನಲ್ಲೇ ರಿಸೈಕ್ಲಿಂಗ್ ಸವಲತ್ತುಗಳಿವೆ. ಕೆಲವು ಬಂದರುಗಳಿಗೆ ಹಲವು ವಸ್ತುಗಳ ಸರಬರಾಜನ್ನು ಕೂಡ ನಿರ್ವಹಿಸುತ್ತದೆ. ತನ್ನದೇ ಸ್ಟೀಂ ಪವರನ್ನು ಉತ್ಪಾದಿಸಬಲ್ಲ ಜಗತ್ತಿನಲ್ಲಿರುವ ಎರಡು ಹಡಗುಗಳಲ್ಲಿ ಇದೂ ಒಂದು. ಇದರಿಂದಾಗಿ ಬಿಸಿ ನೀರಿನ ನಿರಂತರ ಸರಬರಾಜಾಗುತ್ತದೆ. ಜೊತೆಗೆ ಅದರಿಂದ ವಿದ್ಯುತ್ ಅನ್ನು ಕೂಡ ಉತ್ಪಾದಿಸಲಾಗುತ್ತದೆ. ಪ್ಲಾಸ್ಟಿಕ್, ಗಾಜು, ರಟ್ಟು ಮತ್ತು ತ್ಯಾಜ್ಯ ಆಹಾರ ವಸ್ತುಗಳನ್ನು ಹಡಗಿನಲ್ಲೇ ಪುಡಿಮಾಡಿ ಮಯಾಮಿಯ ಬಂದರಿನ ರಿಸೈಕ್ಲಿಂಗ್ ಪ್ಲಾಂಟ್‌ಗಳಿಗೆ ರವಾನಿಸಲಾಗುತ್ತದೆ. ನೀರನ್ನು ಪ್ರತಿಶತ ಹಡಗಿನಲ್ಲೇ ಮರುಬಳಸಿಕೊಳ್ಳುವ ತಂತ್ರಗಳಿವೆ.

ಈ ಹಡಗಿನ ಹೃದಯಭಾಗವಾದ ಎಂಜಿನ್ ಕೋಣೆಯಲ್ಲಿ ಬಸ್ಸುಗಳ ಗಾತ್ರದ ಆರು ಎಂಜಿನ್‌ಗಳಿವೆ. ಆಧುನಿಕ ತಂತ್ರಜ್ಞಾನದ ಕಾರಣ ಈ ಇಂಜಿನ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಚಾರ್ಜ್ ಮಾಡಲು ಕೇವಲ 90 ಸೆಕೆಂಡುಗಳು ಸಾಕೆಂದು ಹೇಳಲಾಗಿದೆ.

ಅತಿಥಿಗಳೆಲ್ಲ ಮಲಗಿದ ನಂತರ ಇಡೀ ಹಡಗಿನ ಎಲ್ಲ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಲಾಗುತ್ತದೆ. ಈ ಬೃಹತ್ ಹಡಗಿನಲ್ಲಿ 13,347 ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಹಡಗಿನ ಮೂವತ್ತು ಡೆಕ್‌ಗಳಲ್ಲಿ 16ನೇ ಡೆಕ್‌ನಿಂದ ಐದನೇ ಡೆಕ್‌ವರೆಗೆ ಕ್ರಿಸ್ಟಲ್‌ನ ಕಲಾಕೃತಿಯೊಂದನ್ನು ತೂಗುಬಿಡಲಾಗಿದೆ. ಇದನ್ನು ವರ್ಷದಲ್ಲೊಮ್ಮೆ ಸ್ವಚ್ಛಗೊಳಿಸಲು ಅದಕ್ಕೆಂದೇ ಒಂದು ತಂಡ ಅತ್ಯಂತ ನಾಜೂಕಿನ ಕ್ಲೀನಿಂಗ್ ಕೆಲಸವನ್ನು ಕೈಗೊಳ್ಳುತ್ತಾರೆ. ಲಿಫ್ಟ್‌ಗಳಲ್ಲಿ ಮೇಲೇರಿ, ಕಂಬಿಗಳ ಸಹಾಯದಿಂದ ಇಳಿಬಿದ್ದು, ಉದ್ದನೆಯ ಕೋಲಗಳಿಗೆ ಕಟ್ಟಿದ ಬ್ರಷ್ ಬಳಸಿ ಉಜ್ಜಿ, ಉಜ್ಜಿ ಹೊಳೆಯುವಂತೆ ಮಾಡುತ್ತಾರೆ.

ಈ ಹಡಗಿನಲ್ಲಿ 1,40,000 ಲೈಟುಗಳಿವೆ. ಅದರಲ್ಲಿ ಶೇ 90ರಷ್ಟು ಎಲ್.ಇ.ಡಿ. ಬಲ್ಬುಗಳು.



ಐಷಾರಾಮಿ ಹಡಗಿನಲ್ಲಿನ ಬಯೊನಿಕ್ ಬಾರ್

ಇದರಿಂದಾಗಿ ಶಾಖ ಕಡಿಮೆ ಉತ್ಪತ್ತಿಯಾಗುವ ಕಾರಣ, ಏರ್ ಕಂಡಿಷನ್ ಮೇಲೆ ಹೆಚ್ಚಿನ ಒತ್ತಡ ಬೀಳುವುದಿಲ್ಲ. ಇವುಗಳ ಉಸ್ತುವಾರಿಗೆಂದೇ ನಿಗದಿತ ಮ್ಯಾನೇಜರುಗಳಿದ್ದಾರೆ. ಈ ಹಡಗಿನ ತೂಕ 2,30,000 ಟನ್ನುಗಳು. ಪ್ರತಿಗಂಟೆಗೆ ಸುಮಾರು 2000 ಲೀಟರ್ ಇಂಧನ ಬೇಡುವ ಈ ಹಡಗು ಪ್ರತಿವಾರ 140 ಮೈಲುಗಳ ಪ್ರವಾಸ ಕೈಗೊಳ್ಳುತ್ತದೆ.

## ಸ್ವಪ್ನಸದೃಶ ಯಾನ

ಪ್ರಯಾಣದ ಕೊನೆಯಲ್ಲಿ ಪ್ರಯಾಣಿಕರನ್ನು ಇಳಿಸುವುದೇ ಹಲವು ಗಂಟೆಗಳ ಕೆಲಸವಾಗಿದ್ದು, ಅದಕ್ಕೆಂದೇ ಹಲವು ನಿರ್ಗಮನದ ಹಾದಿಗಳಿವೆ. ಹೊರಗೋಗುವ ಹಾದಿಗಳಷ್ಟೇ ಜನ ಗೆಸ್ಟ್ ಡಿಪಾರ್ಚರ್ ಮ್ಯಾನೇಜರುಗಳಿದ್ದಾರೆ. ಪೋರ್ಟರ್‌ಗಳಾಗಿ ಕೆಲಸಮಾಡುವವರು ಬೆಳಗಿನ ವ್ಯಾಯಾಮ ಮತ್ತು ತಿಂಡಿಗಳನ್ನು ಮುಗಿಸಿ ಜನರಿಗೆ ಸಹಾಯ ಮಾಡುತ್ತಾರೆ. ಸುಮಾರು 16000 ಲಗೇಜುಗಳನ್ನು ಇಳಿಸಿಕೊಡುತ್ತಾರೆ. 23 ನಿಮಿಷಗಳಲ್ಲಿ ಸಾವಿರ ಜನರು ಇಳಿಯಲು ವ್ಯವಸ್ಥೆಗಳಿವೆ. ಅಂದರೆ ಪ್ರತಿ ಅರ್ಧ ಗಂಟೆಗೆ ಏಳೂವರೆ ಬೋಯಿಂಗ್ 747 ವಿಮಾನಗಳು ಹಿಡಿಸುವಷ್ಟು ಜನರು ಅತ್ಯಂತ ವ್ಯವಸ್ಥಿತವಾಗಿ ಕೆಲವೇ ನಿಮಿಷಗಳಲ್ಲಿ ಇಳಿಯುತ್ತಾರೆ.

ಒಂದು ಕಡೆ ಅತಿಥಿಗಳು ಇಳಿಯಲು ತಯಾರಾಗುತ್ತಿರುವಂತೆ, ಮತ್ತೊಂದು ಕಡೆಯಿಂದ ಹಡಗನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭವಾಗಿರುತ್ತದೆ. ಎಲ್ಲ 6680 ಅತಿಥಿಗಳು ಇಳಿದ ಅರ್ಧ ಗಂಟೆಯಲ್ಲಿ ಮತ್ತೆ 6680 ಅತಿಥಿಗಳು ಹಡಗನ್ನು ಏರಲು ಶುರುಮಾಡಿರುತ್ತಾರೆ. ಅವರ ಆತಿಥ್ಯಕ್ಕೆ ಹಡಗಿನ ಎಲ್ಲ ಸಿಬ್ಬಂದಿ ಮತ್ತೆ ನಗುಮೊಗ ಹೊತ್ತು ತಯಾರಾಗಿರುತ್ತಾರೆ. ‘ಒಂದು ವಾರ ಈ ಹಡಗಿನಲ್ಲಿದ್ದರೂ ಅಲ್ಲಿನ ಎಲ್ಲ ಐಷಾರಾಮಗಳನ್ನು ಸವಿದಿಲ್ಲದ, ಮತ್ತೂ ಮತ್ತೂ ಬೇಕೆನಿಸುವ ಭಾವದಲ್ಲಿ ನಮ್ಮ ಅತಿಥಿಗಳು ನಿರ್ಗಮಿಸುವುದು ನಮ್ಮ ಗುರಿ’ ಎಂದು ಹೇಳುವ ಸಂಸ್ಥೆ ಜನರನ್ನು ಮತ್ತೆ ಮತ್ತೆ ಈ ವಿಲಾಸಿ ಹಡಗಿಗೆ ಬರಬೇಕೆಸುವಷ್ಟು ಆಕರ್ಷಣೆಗಳನ್ನು ಜನರ ಮುಂದಿರಿಸುತ್ತದೆ.

ಕೋವಿಡ್ ಪ್ಯಾಂಡೆಮಿಕ್ ಕಾಲದಲ್ಲಿ ಅಮೆರಿಕ ಪ್ರಪಂಚದಲ್ಲೇ ಅತಿ ಹೆಚ್ಚು ನಲುಗಿದ ದೇಶಗಳಲ್ಲೊಂದು. ಈ ಹಡಗಿನ ಒಬ್ಬ ಅತಿಥಿ ಮತ್ತು ಒಬ್ಬರು ಸಿಬ್ಬಂದಿ ಕೋವಿಡ್‌ಗೆ ತುತ್ತಾದರು. ಈ ಎಲ್ಲ ಕಾರಣಗಳಿಂದಾಗಿ ಮಿಕ್ಕೆಲ್ಲ ವ್ಯವಹಾರದಂತೆ ‘ಸಿಂಫೊನಿ ಆಫ್ ಸೀಸ್’ ಕೂಡ ತನ್ನ ಪ್ರವಾಸಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಿದೆ. ಪೋಸ್ಟ್ ಪ್ಯಾಂಡೆಮಿಕ್ ಯುಗದಲ್ಲಿ ಈ ಹಡಗು ಮತ್ತೆ ಜಗ ಜಗನೆಂದು ಹೊಳೆಯುವುದರಲ್ಲಿ ಸಂದೇಹವಿಲ್ಲ. ಈ ಹಡಗು ಮುಳುಗಿಲ್ಲ.

‘ಸಿಂಫೊನಿ ಆಫ್ ದಿ ಸೀಸ್’ ಹಡಗಿಗಿಂತ ಮೊದಲು ಇದೇ ರಾಯಲ್ ಕ್ಯಾರೆಬ್ಬಿಯನ್ ಕಂಪನಿ ‘ಹಾರ್ಮೊನಿ ಆಫ್ ದಿ ಸೀಸ್’ ಎನ್ನುವ ಜಗತ್ತಿನ ಅತಿದೊಡ್ಡ ಹಡಗನ್ನು ಹೊಂದಿತ್ತು. ಅದಕ್ಕೂ ಮೊದಲಿದ್ದ ಅತಿದೊಡ್ಡ ಹಡಗು, ‘ಅಲ್ಯೂರ್ ಆಫ್ ದಿ ಸೀಸ್’. ಇವೆಲ್ಲ ಐಷಾರಾಮಿ ಹಡಗುಗಳಿಗೆ ಒಂದು ಶ್ರೇಣಿಯಿದೆ. ಇವನ್ನು ‘ಓಯಸಿಸ್ ಕ್ಲಾಸ್’ ಹಡಗುಗಳೆಂದು ಗುರುತಿಸುತ್ತಾರೆ. ಸಿಂಫೊನಿ ಪ್ರಪಂಚದ ಅಂತಹ ಐದನೇ ಹಡಗು. ಆದರೆ ವೈಭವ ಮತ್ತು ಗಾತ್ರದಲ್ಲಿ ಮಿಕ್ಕ ನಾಲಕ್ಕನ್ನೂ ಹಿಂದಿಕ್ಕಿರುವ ಹಡಗು.

ಈ ಪ್ರಪಂಚದಲ್ಲಿ ಯಾವುದೂ ಬಹುಕಾಲ ದೊಡ್ಡದಾಗಿ ಉಳಿಯುವುದಿಲ್ಲ. ಇದಕ್ಕಿಂತಲೂ ದೊಡ್ಡ ಹಡಗನ್ನು ಕಟ್ಟುವ ಕಾರ್ಯ ಈಗಾಗಲೇ ಶುರುವಾಗಿದೆ. ಪ್ಯಾಂಡೆಮಿಕ್ ಇಲ್ಲದಿದ್ದರೆ ಸಿಂಫೊನಿಗಿಂತ ಒಂದಿಷ್ಟು ದೊಡ್ಡದಿರಬಹುದಾದ ಆ ಹಡಗನ್ನು ಇದೇ ವರ್ಷ ಜಗತ್ತಿಗೆ ನೀಡಲಾಗುತ್ತಿತ್ತು. ಪ್ಯಾಂಡೆಮಿಕ್ ಕಾರಣ ಇಡೀ ಪ್ರಪಂಚವೇ ಹಿನ್ನಡೆ ಕಂಡಿರುವ ಈ ವಾತಾವರಣದಲ್ಲಿ ಸಿಂಫೊನಿ ಆಫ್ ದಿ ಸೀಸ್ ಮತ್ತಷ್ಟು ವರ್ಷಗಳ ಕಾಲ ಪ್ರಪಂಚದ ಅತಿದೊಡ್ಡ ಹಡಗೆಂಬ ವಿಶೇಷಣವನ್ನು ಹೊತ್ತು ತಿರುಗಬಹುದು. ಮಾನವನ ಸಮುದ್ರಯಾನದ ಪ್ರತಿಷ್ಠೆಯ ದ್ಯೋತಕವಾಗಿ ಉಳಿಯಬಹುದು.

ಪ್ರತಿಕ್ರಿಯಿಸಿ: **feedback@sudha.co.in**